**ಅಸಲು ದಾವ ಸಂಖ್ಯೆಃ 459/2014**

ಪಿ.ಡಬ್ಲೂ **-1**

**ದಿಃ27-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು 1 ರಿಂದ 3ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎ ಜಿ ಕೆ ರವರಿಂದಃ-**

1. ನಿಪಿ-2 ರ ಕರಾರು ಪತ್ರಕ್ಕೆ ಸಹಿಯನ್ನು ಬೆರಳಚ್ಚುಗಾರರ ಕಚೇರಿಯಲ್ಲಿ ಮಾಡಲಾಗಿದೆ. ಸದರಿ ಸಹಿಯನ್ನು ದಿಃ22-05-1985 ರಂದು ಮಾಡಲಾಗಿದೆ. ನಾನು ಈಗ ನಿಪಿ-2 ಕರಾರು ಪತ್ರವನ್ನು ನೋಡುತ್ತಿದ್ದು ಅದರಲ್ಲಿ 1ನೇ ಖಂಡಿಕೆಯಲ್ಲಿ ' XXXXX ' ಎಂಬ ಚಿಹ್ನೆಗಳನ್ನು ಬೆರಳಚ್ಚುಗಾರರು ಮಾಡಿರುತ್ತಾರೆ. ಸದರಿ ಚಿಹ್ನೆಗಳನ್ನು ಬೆರಳಚ್ಚು ಮಾಡುವ ಮೊದಲು ಸದರಿ ಜಾಗದಲ್ಲಿ ಶ್ರೀ ರಾಘವೇಂದ್ರ ಸೊಸೈಟಿಯ ಹೆಸರು ಅಲ್ಲಿ ನಮೂದು ಮಾಡಲಾಗಿತ್ತು. ಸದರಿ ಜಾಗದಲ್ಲಿ ಸೊಸೈಟಿಯ ನೊಂದಣಿ ಸಂಖ್ಯೆ ಸಹ ನಮೂದು ಮಾಡಲಾಗಿತ್ತು ಹಾಗೂ ಅದರ ವಿಳಾಸ ಸಹ ನಮೂದು ಮಾಡಲಾಗಿತ್ತು ಎಂದರೆ ಸರಿ. ನನ್ನ ಹೆಸರು ಸೊಸೈಟಿಯ ಸೆಕ್ರೆಟರಿ ಎಂದು ಮೊದಲು ನಮೂದು ಮಾಡಲಾಗಿತ್ತು ಎಂದರೆ ಸರಿ. ಅದೇ ದಿನ ಎಂದರೆ ಒಂದೇ ದಿನದಂದು 'XXXXX' ಚಿಹ್ನೆಯಿಂದ ಸದರಿ ನಮೂದುಗಳನ್ನು ತೆಗೆದುಹಾಕಲಾಗಿತ್ತು. ಮೂಲತಃ ನಿಪಿ-2 ರಲ್ಲಿ ಶ್ರೀ ರಾಘವೇಂದ್ರ ಸೊಸೈಟಿಯ ಸೆಕ್ರೇಟರಿ ಆಗಿ ನನ್ನ ಹೆಸರು ನಮೂದು ಮಾಡಲಾಗಿತ್ತು ಎಂದರೆ ಸರಿ. 'XXXXX' ಎಂದು ಬೆರಳಚ್ಚು ಮಾಡಿರುವ ಜಾಗದಲ್ಲಿ ನಾನು ಅಥವಾ ಪ್ರತಿವಾದಿ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ-2 ರಲ್ಲಿ ನನ್ನ ಖಾಸಗಿ ವಿಳಾಸ ಬರೆದಿರುವುದಿಲ್ಲ ಎಂದರೆ ಸರಿ. ಮೂಲತಃ ನಿಪಿ-2 ರ ಕರಾರುಪತ್ರ ಮುಚ್ಚಂಡಿ ಹಾಗೂ ಶ್ರೀ ರಾಘವೇಂದ್ರ ಸೊಸೈಟಿಯ ನಡುವೆ ಆದಂತೆ ಬೆರಳಚ್ಚು ಮಾಡಲಾಗಿತ್ತು ಎಂದರೆ ಸಾಕ್ಷಿ ಸದರಿ ಕರಾರು ಪತ್ರ ಮುಚ್ಚಂಡಿ ಹಾಗೂ ತನ್ನ ನಡುವೆ ಆಗಿತ್ತು ಆದರೆ ಬೆರಳಚ್ಚುಗಾರರ ತಪ್ಪಿ ನಿಂದ ಸೊಸೈಟಿಯ ಹೆಸರು ಬರೆಯಲಾಗಿತ್ತು ಎಂದು ನುಡಿಯುತ್ತಾರೆ. ಮೂಲತಃ ಕರಾರು ಪತ್ರ ನನ್ನ ಹಾಗೂ ಮುಚ್ಚಂಡಿ ರವರ ನಡುವೆ

ನಡೆದಿದ್ದರೂ ಬೆರಳಚ್ಚುಗಾರರಿಗೆ ಸೊಸೈಟಿಯ ಹೆಸರು ಯಾರು ಹೇಳಿದರು ಎಂದರೆ ಸಾಕ್ಷಿ ಬೆರಳಚ್ಚುಗಾರರು ನಾನು ಎಂದರೆ ಸೊಸೈಟಿಯ ಸೆಕ್ರೇಟರಿ ಎಂದು ತಿಳಿದು ನಿಪಿ-2 ರಲ್ಲಿ ಹಾಗೆಯೇ ಮೊದಲು ನಮೂದು ಮಾಡಿದ್ದರು ಎಂದು ನುಡಿಯುತ್ತಾರೆ. ಬೆರಳಚ್ಚುಗಾರರು ತಪ್ಪಾಗಿ ನಮೂದಿಸಿರುವುದು ನನಗೆ ಅದೇ ದಿನ ನಿಪಿ-2 ನ್ನು ಟೈಪ್ ಮಾಡುವ ದಿನವೆ ತಿಳಿದಿತ್ತು. ಮುಚ್ಚಂಡಿ ಹಾಗೂ ನನ್ನ ನಡುವೆ ಕರಾರುಪತ್ರ ಆಗಿದ್ದರೆ ನಾನು ನನ್ನ ವಿಳಾಸ ಏಕೆ ಹೇಳಲಿಲ್ಲ ಎಂದರೆ ಸಾಕ್ಷಿಯು ಸೊಸೈಟಿಯ ವಿಳಾಸವೇ ನನ್ನ ವಿಳಾಸ ಆಗಿತ್ತು ಎಂದು ನುಡಿಯುತ್ತಾರೆ. ನನ್ನ ಹೆಸರಿನ ನಂತರ ಸೊಸೈಟಿಯ ವಿಳಾಸವನ್ನು ಬರೆಯುವಂತೆ ನಾನು ಬೆರಳಚ್ಚುಗಾರರಿಗೆ ಸೂಚಿಸಿದ್ದೆ ಆದರೆ ಅವರು ತಪ್ಪು ಮಾಡಿರುತ್ತಾರೆ. ನಿಪಿ-2 ರ ಕರಾರು ಪತ್ರದಲ್ಲಿ ' XXXX' ಎಂದು ನಮೂದು ಮಾಡಿರುವ ಜಾಗದಲ್ಲಿ ಯಾರದ್ದೂ ಸಹಿ ಇರುವುದಿಲ್ಲ ಎಂದರೆ ಸರಿ.

2. ನಾನು ಈಗ ನಿಪಿ-2 ರ ಕರಾರು ಪತ್ರ ನೊಡುತ್ತಿದ್ದು ಅದರಲ್ಲಿ 5ನೇ ಖಂಡಿಕೆಯಲ್ಲಿ ಕ್ರಮ ಸಂಖ್ಯೆ 2 ಎಂದು ನಮೂದು ಮಾಡಿರುವಲ್ಲಿ 'to be' ಮತ್ತು 'or before' ಎಂದು ನಮೂದಿಸಿ ನಂತರದಲ್ಲಿ 'XXXXX' ಗುರುತಿನಿಂದ ಅದನ್ನು ತೆಗದುಹಾಕಲಾಗಿದೆ ಎಂದರೆ ಸರಿ. ನಿಪಿ-2 ರ 3ನೇ ಖಂಡಿಕೆಯಲ್ಲಿ 'as' ಎಂದು ಇರುವುದನ್ನು 'has' ಎಂದು ನಮೂದು ಮಾಡಿ ಯಾರು ತಿದ್ದುಪಡಿ ಮಾಡಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಮುಚ್ಚಂಡಿ ರವರು ತಿದ್ದುಪಡಿ ಮಾಡಿ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿ 1ನೇ ಪುಟದಲ್ಲಿ ನಮೂದಿಸಿದ 30,000/- ಹಾಗೂ 11,000/- ರ ಮೊತ್ತವನ್ನು ನಗದು ರೂಪದಲ್ಲಿ ಕೊಡಬೇಕೆಂದು ಕರಾರು ಆಗಿತ್ತು. ಆ ರೀತಿ ನಗದು ರೂಪದಲ್ಲಿ ಮೊತ್ತವನ್ನು ಕೊಡಬೇಕೆಂದು ನಿಪಿ-2 ರಲ್ಲಿ ಎಲ್ಲಿಯೂ ನಮೂದಾಗಿರುವುದಿಲ್ಲ ಎಂದರೆ ಸರಿ. ನಿಪಿ-2 ರ ಕರಾರುಪತ್ರದ ಪ್ರಕಾರ ಟೌನ ಪ್ಲಾನಿಂಗ್ ನ ಕೆಲಸಗಳನ್ನು ಯಾರು ನೋಡಿಕೊಳ್ಳಬೇಕೆಂದು ಕರಾರು ಇತ್ತು ಎಂದರೆ ಸಾಕ್ಷಿ ಟೌನ್ ಪ್ಲಾನಿಂಗ್ ಗೆ ಅರ್ಜಿಯನ್ನು ಮಾಲೀಕರಾದ ಮುಚ್ಚಂಡಿ ರವರು ಕೊಡಬೇಕೆಂದು ಹಾಗೂ ಅದರ ಮುಂದಿನ ಕೆಲಸಗಳನ್ನು ನಾನು

ನೋಡಿಕೊಳ್ಳಬೇಕೆಂದು ಕರಾರು ಆಗಿತ್ತು ಎಂದು ನುಡಿಯುತ್ತಾರೆ. ಆ ಪ್ರಕಾರ ಮುಚ್ಚಂಡಿ ರವರು ಅರ್ಜಿ ನೀಡಿದ್ದರಾ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ನಿಪಿ-2 ರ 3ನೇ ನಿಬಂಧನೆ ಪ್ರಕಾರ ನಮೂದಾಗಿರುವ ಅಂಶಗಳು ಸರಿ ಇರುತ್ತವೆ. ಅದರ ಪ್ರಕಾರ ಟೌನ್ ಪ್ಲಾನಿಂಗನ ಎಲ್ಲಾ ಕೆಲಸ ನಾನೇ ಮಾಡಬೇಕಾಗಿರುತ್ತದೆ ಎಂದರೆ ಸರಿ. ಸದರಿ ನಿಬಂಧನೆ ಪ್ರಕಾರ ನಾನು ಟೌನ್ ಪ್ಲಾನಿಂಗನಿಂದ land use certificate ಪಡದಿರುತ್ತೇನೆ. ಸರ್ವೆ ನಂಬರ 397/1 ರ ಸ್ವತ್ತು ವ್ಯವಸಾಯಿಕ ಜಮೀನಾಗಿತ್ತು. ನಾನು ಸದರಿ ಜಮೀನನ್ನು ವ್ಯವಸಾಯಿಕ ಜಮೀನಾಗಿ ಉಪಯೋಗಿಸಿರುತ್ತೇನೆ. urban land ceiling ನಿಂದ ಅನುಮತಿಯನ್ನು ಮಾಲೀಕರೇ ಪಡೆಯಬೇಕಿತ್ತು. ಅದೇ ರೀತಿ ಮಾಲೀಕರು ಅರ್ಜಿಯನ್ನು ಸಲ್ಲಿಸಿದ್ದರು. ಮುಚ್ಚಂಡಿ ರವರು land ceiling ನಿಂದ ಅನುಮತಿ ಪಡೆಯಲು ಅರ್ಜಿ ಸಲ್ಲಿಸಿದ ಬಗ್ಗೆ ನನ್ನ ಬಳಿ ಪುರಾವೆ ಇರುವುದಿಲ್ಲ. ಅವರು ಅರ್ಜಿ ಸಲ್ಲಿಸಿರುವ ಬಗ್ಗೆ ನಾನು ಸ್ವತಃ ನೋಡಿರುವುದಿಲ್ಲ. ಸದರಿ ಸ್ವತ್ತಿನ ಕುರಿತು ಅನ್ಯಸಂಕ್ರಮಣವನ್ನು ನಾನು ಸ್ವತ್ತಿನ ಮಾಲೀಕನಾದ ನಂತರ ಅದನ್ನು ಮಾಡಿಕೊಳ್ಳಬೇಕೆಂದು ಕರಾರು ಆಗಿತ್ತು. ಆ ರೀತಿ ನಿಪಿ-2 ರಲ್ಲಿ ಲಿಖಿತವಾಗಿ ನಮೂದಾಗಿರುವುದಿಲ್ಲ. ಕರಾರಿನ ಪ್ರಕಾರ ಖರೀದಿಯನ್ನು ಸಂಬಂಧಪಟ್ಟ ಅಧಿಕಾರಿಯಿಂದ ಅನುಮತಿ ಪಡೆದ ನಂತರ ಮಾಡಬೇಕೆಂದು ನಿರ್ಧಾರವಾಗಿತ್ತು. ಮುಚ್ಚಂಡಿ ರವರು ಸ್ವತ್ತನ್ನು ಮಾರಾಟ ಮಾಡಲು ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದರಾ ಎಂದು ತಿಳಿದುಕೊಳ್ಳಲು ನಾನು ಪ್ರಯತ್ನಪಟ್ಟಿರುತ್ತೇನೆ. ಆ ರೀತಿ ಮಾರಾಟ ಮಾಡಲು ಅನುಮತಿ ಪಡೆದಿರುತ್ತಾರಾ ಎಂದು ಮುಚ್ಚಂಡಿ ರವರು ನನಗೆ ಹೇಳಿರುವುದಿಲ್ಲ. ಕರಾರು ಪತ್ರವಾದ 6 ತಿಂಗಳ ನಂತರ ನಾನು ಮುಚ್ಚಂಡಿ ರವರನ್ನು ಸಂಪರ್ಕಿಸಿ ಸದರಿ ಮಾರಾಟ ಅನುಮತಿ ಕುರಿತು ಲಿಖಿತವಾಗಿ ವಿಚಾರಿಸಿರುವುದಿಲ್ಲ. 1985 ನೇ ಇಸವಿಯಿಂದ ಈ ದಾವೆ ಹೂಡುವ ಸಮಯದವರೆಗೂ ನಾನು ಮುಚ್ಚಂಡಿ ರವರೊಂದಿಗೆ ಲಿಖಿತವಾಗಿ ಯಾವುದಾದರೂ ಪತ್ರ ವ್ಯವಹಾರ ಮಾಡಿರುತ್ತೀನಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 30,000/- ಹಾಗೂ 11,000/- ರೂ.ಗಳ ಹಣವನ್ನು ನಾನು ಮುಚ್ಚಂಡಿ ರವರಿಗೆ ಕೊಟ್ಟಿರುವ ಬಗ್ಗೆ ನನ್ನ ಬಳಿ ರಶೀದಿ

ಇರುವುದಿಲ್ಲ. ಸದರಿ ಮೊತ್ತವನ್ನು ನಾನು ನನ್ನ ವ್ಯವಸಾಯದ ಆದಾಯದಿಂದ ಕೊಟ್ಟಿರುತ್ತೇನೆ ಹಾಗೂ ಅದರ ಕುರಿತು ನಾನು ಯಾವುದೇ ಲೆಕ್ಕಪತ್ರವನ್ನು ನಿರ್ವಹಣೆ ಮಾಡಿರುವುದಿಲ್ಲ. ನಾನು ಆ ಸಮಯದಲ್ಲಿ ತೆರಿಗೆ ಪಾವತಿದಾರನಾಗಿರಲಿಲ್ಲ . ಆ ಸಮಯದಲ್ಲಿ ನನ್ನ ಬಳಿ 30,000/- ಹಾಗೂ 11,000/- ರೂ. ಹಣ ಇತ್ತು ಎಂದು ತೋರಿಸಲು ನನ್ನ ಬಳಿ ಪುರಾವೆ ಇರುತ್ತದೆ ಹಾಗೂ ಅದನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. 1985 ನೆ ಇಸವಿಯಿಂದ ಈ ದಾವೆ ಹೂಡುವವರೆಗೂ ದಾವಾ ಸ್ವತ್ತಿನ ಕುರಿತು ಅನ್ಯಸಂಕ್ರಮಣ ಆದೇಶ ಪಡೆಯಲು ಪ್ರಯತ್ನ ಪಟ್ಟಿರುತ್ತೀರಾ ಎಂದರೆ ಸಾಕ್ಷಿ ಅದರ ಕುರಿತು ಖರೀದಿ ಪತ್ರ ಆದ ನಂತರವೇ ಅನ್ಯಸಂಕ್ರಮಣ ಮಾಡಿಕೊಳ್ಳಲಾಗುವುದು ಎಂದು ನುಡಿಯುತ್ತಾರೆ. ಆ ರೀತಿ ಖರೀದಿ ಪತ್ರ ಆದ ನಂತರ ಅನ್ಯಸಂಕ್ರಮಣ ಮಾಡಬೇಕೆಂದು ಕರಾರುಪತ್ರದಲ್ಲಿ ನಮೂದು ಇರುತ್ತದೆ. ಮುಚ್ಚಂಡಿ ರವರು ಈ ವ್ಯವಹಾರದ ಬಗ್ಗೆ ನನಗೆ ಎಂದಿಗೂ ಲಿಖಿತವಾಗಿ ಪತ್ರ ವ್ಯವಹಾರ ಮಾಡಿರುವುದಿಲ್ಲ. ನಾನು ದಾವಾ ಜಮೀನಿನ ಕುರಿತು layout ಮಾಡಿಕೊಂಡಿರುವುದಿಲ್ಲ ಏಕೆಂದರೆ ಅನ್ಯಸಂಕ್ರಮಣ ಆಗಿರುವುದಿಲ್ಲ. ಕರಾರುಪತ್ರ ಆಗುವ ಸಮಯದಲ್ಲಿ ಖರೀದಿಗೆ ಕೊಡುವವನು ಹಾಗೂ ಖರೀದಿ ಮಾಡುವವರ ಜವಾಬ್ದಾರಿಗಳನ್ನು ಉಲ್ಲೇಖಿಸಲಾಗಿರುತ್ತದೆ ಎಂದರೆ ಸರಿ. ಖರೀದಿ ಪತ್ರ ಆದ ನಂತರ ಏನು ಜವಾಬ್ದಾರಿ ಎಂದು ಯಾವುದೇ ಕರಾರುಪತ್ರದಲ್ಲಿ ನಮೂದು ಮಾಡಲಾಗುವುದಿಲ್ಲ ಎಂದರೆ ಸರಿ.

ಮುಚ್ಚಂಡಿ ರವರು ದಾವಾ ಸ್ವತ್ತಿನ ಕುರಿತು ನನ್ನೊಂದಿಗೆ ಯಾವುದೇ ಕರಾರು ಪತ್ರವನ್ನು ಎಂದಿಗೂ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮುಚ್ಚಂಡಿ ರವರು ಯಾವುದೇ ಕರಾರುಪತ್ರದ ಕುರಿತು ನನ್ನಿಂದ ಎಂದಿಗೂ ಸಹ ಯಾವುದೆ ಹಣ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ರಾಘವೇಂದ್ರ ಸೊಸೈಟಿಯೊಂದಿಗೆ ಆಗಿರುವ ಕರಾರು ಪತ್ರವನ್ನು ದುರುಪಯೋಗ ಮಾಡಿಕೊಂಡು ಅದರಲ್ಲಿ ತಿದ್ದುಪಡಿ ಮಾಡಿಕೊಂಡು ನಿಪಿ-2 ರಂತೆ ಖೊಟ್ಟಿ ಕರಾರು ಪತ್ರ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ರ ಕರಾರು ಪತ್ರ ಒಂದು ಖೊಟ್ಟಿ ತಯಾರು ಮಾಡಿರುವ ಕರಾರು ಪತ್ರಆಗಿರುತ್ತದೆ ಎಂದರೆ ಸರಿಯಲ್ಲ. ಈ ದಾವೆ ಹೂಡುವ ಮೊದಲು ನಾನು ಪ್ರತಿವಾದಿಯರಿಗೆ ಯಾವುದೇ ನೋಟಿಸ

ನೀಡಿರುವುದಿಲ್ಲ. ದಾವಾ ಜಮಿನಿನ ಕುರಿತು ಯಾವುದೇ ಸರ್ಕಾರಿ ಕಚೇರಿಗಳಲ್ಲಿ ಯಾರೂ ಸಹ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿ ಮುಚ್ಚಂಡಿ ರವರು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಮುಚ್ಚಂಡಿ ರವರು ಸರ್ಕಾರಿ ಕಚೇರಿಗಳಲ್ಲಿ ಅರ್ಜಿ ಸಲ್ಲಿಸಿದ್ದರು ಎಂದು ತೋರಿಸಲು ನನ್ನ ಬಳಿ ಪುರಾವೆ ಇರುವುದಿಲ್ಲ. ಮುಚ್ಚಂಡಿ ರವರು ಆ ರೀತಿ ಅರ್ಜಿ ನೀಡಿರುತ್ತಾರಾ ಎಂದು ನಾನು ವೈಯಕ್ತಿಕವಾಗಿ ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**